1	2	3	4	5
17.	Kolar	6	35.28	278.61
18.	Koppal	4	19.70	210.00
19.	mandya	16	143.21	1797.00
20.	Mysore	4	37.81	260.00
21.	Raichur	6	33.70	298.91
22.	Shimoga	7	93.93	460.80
23.	Tumkur	9	164.50	2091.59
24.	Udupi	8	69.40	572.20
25.	Uttara Kannada	3	20.70	118.00
	Total	**198**	**1795.37**	**16408.44**

ರಾಜ್ಯದ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಕಂಪು ಯೋಜನೆ

3306 (3758) : ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ಉದ್ಯೋಗ ವಿನಿಮಯ ಕಛೇರಿಗಳಲ್ಲಿ ಕಂಪು ಯೋಜನೆಯನ್ನು ಜಾರಿಗೆ ತರಲಾಗಿದೆಯೆ;

ಆ) ಹಾಗಿದ್ದರೆ, ಯಾವ ಯಾವ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಈ ಯೋಜನೆಯನ್ನು ಜಾರಿಗೆ ತರಲಾಗಿದೆ; ಇದರ ಉದ್ದೇಶವೇನು;

ಇ) ಈ ಯೋಜನೆಯನ್ನು ಬೇರೆ ರಾಜ್ಯದ ಖಾಸಗಿಯವರಿಗೆ ವಹಿಸಲಾಗಿದೆಯೇ; ಹಾಗಿದ್ದರೆ, ಇದರ ಮಾಹಿತಿ ನೀಡುವುದು; ಎಷ್ಟು ವರ್ಷಗಳವರೆಗೆ ವಹಿಸಲಾಗಿದೆ;

ಈ) ಖಾಸಗಿಯವರು ಪ್ರತಿಯೊಬ್ಬ ಅಭ್ಯರ್ಥಿಗಳಿಂದ ಪಡೆಯುತ್ತಿರುವ ಹಣ ಎಷ್ಟು; ಇದರಿಂದ ಅಭ್ಯರ್ಥಿಗಳಿಗೆ ಆರ್ಥಿಕವಾಗಿ ಹೊರೆಯಾಗುವುದಿಲ್ಲವೇ;

ಉ) ಈ ಯೋಜನೆಯನ್ನು ಹೊರ ರಾಜ್ಯದವರಿಗೆ ನೀಡಿರುವುದರಿಂದ ಹೊರ ರಾಜ್ಯದ ಅಭ್ಯರ್ಥಿಗಳನ್ನು ನೇಮಕಾತಿ ಮಾಡಿಕೊಳ್ಳುವುದರಿಂದ ರಾಜ್ಯದ ಅಭ್ಯರ್ಥಿಗಳು ಸರ್ಕಾರಿ ಕೆಲಸದಿಂದ ವಂಚಿತರಾಗುವುದಿಲ್ಲವೇ;

ಊ) ಈ ಯೋಜನೆಯನ್ನು ಖಾಸಗಿಯವರಿಗೆ ವಹಿಸಿರುವುದರಿಂದ ಸರ್ಕಾರ ಹಾಗೂ ಉದ್ಯೋಗ ತರಬೇತಿ ಇಲಾಖೆಯು ಉದ್ಯೋಗ ವಿನಿಮಯ ಕೇಂದ್ರಗಳ ಮೇಲೆ ತನ್ನ ನಿಯಂತ್ರಣವನ್ನು ಕಳೆದುಕೊಳ್ಳುವುದಿಲ್ಲವೇ;

ಋ) ಹಾಗಾದರೆ, ಈ ಯೋಜನೆಯನ್ನು ರದ್ದುಪಡಿಸಲಾಗುವುದೆ;

ಎ) ಇಲ್ಲದಿದ್ದರೆ, ಈ ಯೋಜನೆಯನ್ನು ಜಾರಿಗೊಳಿಸಿರುವುದರಿಂದ ಸರ್ಕಾರ ಉದ್ಯೋಗ ವಿನಿಮಯ ಕೇಂದ್ರಗಳನ್ನು ಮುಚ್ಚಲಾಗುವುದೇ?

ಶ್ರೀ ಖಮರುಲ್ ಇಸ್ಲಾಂ (ಕಾರ್ಮಿಕ ಸಚಿವರು)

ಅ) ಹೌದು.

ಆ) ಬೆಂಗಳೂರು, ಮಂಡ್ಯ ಮೈಸೂರು ಮಂಗಳೂರು, ಹುಬ್ಬಳ್ಳಿ, ಗುಲ್ಬರ್ಗಾ ಕೇಂದ್ರಗಳಲ್ಲಿ ಈ ಯೋಜನೆಯನ್ನು ಪ್ರಾಯೋಗಿಕವಾಗಿ ಜಾರಿಗೆ ತರಲಾಗಿದೆ.

1) 1996 ರ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಹಿನ್ನೆಲೆ ಹಾಗೂ ಸರ್ಕಾರ ಮತ್ತು ಸಾರ್ವಜನಿಕ ವಲಯದಲ್ಲಿ ಉದ್ಯೋಗಾವಕಾಶಗಳು ಕ್ಷೀಣಿಸುತ್ತಿರುವುದರಿಂದ ಕಂಪು ಯೋಜನೆಯನ್ನು ಪ್ರಾಯೋಗಿಕ ಆಧಾರದ ಮೇಲೆ ಪ್ರಯತ್ನಿಸಲಾಗುತ್ತಿದೆ. ಇದು ವೆಬ್ ಆಧಾರದ ನೋಂದಣಿ ಮೂಲಕ ರಾಜ್ಯ, ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಎಲ್ಲಾ ವಲಯಗಳಿಗೂ ಉದ್ಯೋಗಾವಕಾಶದ ಸೇವೆಗಳನ್ನು ಒದಗಿಸುವ ಉದ್ದೇಶವನ್ನು ಹೊಂದಿರುತ್ತದೆ.

2) ಖಾಸಗಿ ಉದ್ಯೋಗ ವಿನಿಮಯ ಕೇಂದ್ರಗಳಿಂದ ನಡೆಯುತ್ತಿರುವ ಶೋಷಣೆಯಿಂದ ತಪ್ಪಿಸಲು ಮತ್ತು ಕರ್ನಾಟಕ ಆಡಳಿತ ಸುಧಾರಣಾ ಆಯೋಗವು ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಆಧುನಿಕ ತಂತ್ರಜ್ಞಾನ ಬಳಸಿಕೊಂಡು ವೆಬ್‌ಸೈಟ್ ಮುಖೇನ ಉದ್ಯೋಗ ಸೇವೆಯನ್ನು ನಿರ್ವಹಿಸುವಂತೆ ಶಿಫಾರಸ್ಸು ಮಾಡಿರುತ್ತದೆ.

ಇ) ಇಲ್ಲ

ಈ) ಪ್ರತಿ ಅಭ್ಯರ್ಥಿಯಿಂದ ರೂ. 100–00

ಇಲ್ಲ.

ಉ) ಇಲ್ಲ.

ಊ) ಇಲ್ಲ.

ಋ) ಇಲ್ಲ.

ಎ) ಇಲ್ಲ.

ಉದ್ಯೋಗ ಮತ್ತು ತರಬೇತಿ ಇಲಾಖೆಯಲ್ಲಿ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಕಿರಿಯ ತರಬೇತಿ ಅಧಿಕಾರಿಗಳು

3307 (3973) : ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉದ್ಯೋಗ ಮತ್ತು ತರಬೇತಿ ಇಲಾಖೆಯಲ್ಲಿ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಕಿರಿಯ ತರಬೇತಿ ಅಧಿಕಾರಿಗಳ ಸಂಖ್ಯೆ ಎಷ್ಟು;

ಆ) ಇವರುಗಳಲ್ಲಿ ಕೇವಲ 76 ಕಿರಿಯ ತರಬೇತಿ ಅಧಿಕಾರಿಗಳನ್ನು ಮಾತ್ರ ಸೇವೆಯಲ್ಲಿ ಸಕ್ರಮಗೊಳಿಸಿರುವುದು ನಿಜವೆ;

ಇ) ಹಾಗಿದ್ದರೆ, ಕರ್ನಾಟಕ ಉಚ್ಚ ನ್ಯಾಯಾಲಯವು ಇನ್ನುಳಿದ 116 ಕಿರಿಯ ತರಬೇತಿ ಅಧಿಕಾರಿಗಳನ್ನು ಖಾಯಂಗೊಳಿಸುವಂತೆ ತೀರ್ಪು ನೀಡಿರುವುದು ನಿಜವೆ; ಹಾಗಿದ್ದರೆ ಇವರುಗಳನ್ನು ಖಾಯಂಗೊಳಿಸದಿರಲು ಕಾರಣಗಳೇನು;

ಈ) ಇವರುಗಳು ಖಾಯಂ ನೌಕರರಂತೆ ಎಲ್ಲಾ ಸವಲತ್ತುಗಳನ್ನು ಪಡೆಯುತ್ತಿರುವುದರಿಂದ, ಸರ್ಕಾರದ ಬೊಕ್ಕಸಕ್ಕೆ ಹೊರೆಯಾಗದೆ ಇರುವುದರಿಂದ ಇವರುಗಳನ್ನು ಯಾವಾಗ ಖಾಯಂಗೊಳಿಸಲಾಗುವುದು?

ಶ್ರೀ ಖಮರುಲ್ ಇಸ್ಲಾಂ (ಕಾರ್ಮಿಕ ಸಚಿವರು)

ಅ) 92.